

# ಕೈಗೊಂಬೆ ಆಟದ ಸೂಚನೆಗಳು


ಹೊಲಕ್ಕೆ ಹೋಗೋಣ ರಜಾದಿನದ ಸತ್ಯವೇದ ಶಾಲೆಯಲ್ಲಿ ಪ್ರತಿದಿನ ಕುದುರೆ ಮತ್ತು ಹುಂಜದೊಂದಿಗೆ ಕೈಂಬೆ ಆಟವಿರುತ್ತದೆ. ಈ ಎರಡು ಕೈಗೊಂಬೆಗಳು ನಿಮ್ಮ ಕಾರ್ಯಕ್ರಮಕ್ಕೆ ಬರುತ್ತವೆ ಮತ್ತು ಭಾಗವಹಿಸುತ್ತವೆ. ಕೈಗೊಂಬೆ ಆಟವನ್ನು ಕಾರ್ಯಕ್ರಮದ ಅಂತ್ಯದಲ್ಲಿ ನಡೆಸಲಾಗುತ್ತದೆ ಮತ್ತು ಮಕ್ಕಳು ಬೆಳಗ್ಗೆಯಿಂದ ಕಲಿತಿರುವ ಪಾಠವನ್ನು ವಿಮರ್ಶೆ ಮಾಡಲು ಇದನ್ನು ಉಪಯೋಗಿಸಲಾಗುತ್ತದೆ. ಈ ಎರಡು ಕೈಗೊಂಬೆಗಳನ್ನು ಅಂದರೆ ಕುದುರೆ ಮತ್ತು ಹುಂಜವನ್ನು ತಯಾರಿಸಲು ಬೇಕಾದ ಸಲಹೆಗಳನ್ನು ಕೊಡಲು ನಾವು ಬಹಳ ಉತ್ಸುಕರಾಗಿದ್ದೇವೆ. ಇವುಗಳು ಹೆಚ್ಚು ನಗುವನ್ನುಂಟು ಮಾಡುತ್ತವೆ ಮತ್ತು ನಿಮ್ಮ ಮಕ್ಕಳು ಪಾಠವನ್ನು ವಿಮರ್ಶೆ ಮಾಡಲು ಹಾಗೂ ಮಕ್ಕಳು ತಾವು ಕಲಿತಿರುವ ಪಾಠಗಳನ್ನು ತಮ್ಮ ತಂದೆತಾಯಿಗಳಿಗೆ ಹೇಳಲು ಸಹಾಯ ಮಾಡುತ್ತದೆ.

೧. ಬೇಕಾಗಿರುವ ಸಾಮಗ್ರಿಗಳನ್ನು ಒಟ್ಟುಗೂಡಿಸಿರಿ.




* ಕತ್ತರಿ
* ಪೆನ್ಸಿಲ್ (ಬಟ್ಟೆಯ ಮೇಲೆ ಟ್ರೇಸ್ ಮಾಡಲು)
* ಗೋಂದು (ಬೇಗ ಅಂಟಿಕೊಳ್ಳುವಂಥದ್ದು: ಸಿಲಿಕೊನ್ ಅಥವಾ ಬಿಸಿ ಗೋಂದು)







* ಒತ್ತಿ ತುಂಬುವದು ಅಥವಾ ತುಂಬುವದು
* ಕಾರ್ಡ್ ಬೋರ್ಡ್ (ಬೇಕಿದ್ದರೆ ಉಪಯೋಗಿಸಬಹುದು)
* ಸೂಜಿ ಮತ್ತು ದಾರ
* ವೈಯರ್: ಒಂದೂವರೆ ಮೀಟರ್




೨. ಐದು ಪಿಡಿಎಫ್ ಮಾದರಿ ಹಾಳೆಗಳನ್ನು ಡೌನ್ ಲೋಡ್ ಮಾಡಿರಿ ಮತ್ತು ದೊಡ್ಡ ಅಳತೆಗೆ ೧೧x೧೭ ಅಥವಾ ಎ೩ ಹಾಳೆ ಉಪಯೋಗಿಸಿರಿ ಮತ್ತು ಚಿಕ್ಕ ಅಳತೆಗೆ ೮.೫x೧೧ ಅಥವಾ ಎ೪ ಹಾಳೆ ಉಪಯೋಗಿಸಿರಿ.

* ಕುದುರೆಯ ತಲೆಯ ಮಾದರಿ
* ಕುದುರೆಯ ಹೆಚ್ಚುವರಿ ಭಾಗಗಳ ಮಾದರಿ
* ಹುಂಜದ ತಲೆಯ ಮಾದರಿ
* ಹುಂಜದ ಹೆಚ್ಚುವರಿ ಭಾಗಗಳ ಮಾದರಿ
* ಹುಂಜದ ರೆಕ್ಕೆಗಳ ಮಾದರಿ



೩. ಕುದುರೆ ಮತ್ತು ಹುಂಜಕ್ಕೆ ಬೇಕಾಗುವ ಬಟ್ಟೆಯನ್ನು ಖರೀದಿಸಿರಿ. ನಾವು ಉಣ್ಣೆಯಿಂದಾದ ಬಟ್ಟೆಯನ್ನು ಶಿಫಾರಸ್ಸು ಮಾಡುತ್ತೇವೆ, ಯಾಕಂದರೆ ಅದು ಗಟ್ಟಿಯಾದ ಬಟ್ಟೆಯಾಗಿರುತ್ತದೆ ಮತ್ತು ಬೇಗ ಹರಿಯುವದಿಲ್ಲ. ಆದರೂ ನೀವು

ನಿಮ್ಮ ಪ್ರದೇಶದಲ್ಲಿ ನಿಮ್ಮ ಅನುಕೂಲತೆಗೆ ಸರಿಹೊಂದುವ ಬಟ್ಟೆಯನ್ನು ಖರೀದಿಸಬಹುದು. ನಾವಾದರೋ ದೃಢ ಮತ್ತು ಗಟ್ಟಿಯಾಗಿರುವ ಬಟ್ಟೆಯನ್ನು ಶಿಫಾರಸ್ಸು ಮಾಡುತ್ತೇವೆ.
ಕೆಳಗೆ ನಿಮಗೆ ಬಟ್ಟೆಯ ಅಂದಾಜು ಅಳತೆಯನ್ನು ಕೊಟ್ಟಿದ್ದೇವೆ, ಬಟ್ಟೆ ಖರೀದಿಸುವಾಗ ಮಾದರಿಯನ್ನು ನಿಮ್ಮೊಂದಿಗೆ ತಂದರೆ ಕಡಿಮೆಯಾಗದಂತೆ ಖರೀದಿಸಬಹುದು.

- ಕಂದು ಬಣ್ಣ: ೧/೨ ಮೀಟರ್
- ಕೆಂಪು ಬಣ್ಣ: ೧/೮ ಮೀಟರ್
- ಆರೆಂಜ್ ಬಣ್ಣ: ೧/೨ ಮೀಟರ್
- ಬಿಳಿ ಬಣ್ಣ: ೧ ಮೀಟರ್

## ಕುದುರೆ ಕೈಗೊಂಬೆಯ ಸೂಚನೆಗಳು:



೧. ಕುದುರೆಯ ದೇಹ ಮತ್ತು ಬಾಯಿಗೆ ಬೇಕಾಗುವಷ್ಟು ಬಟ್ಟೆಯನ್ನು ಕತ್ತರಿಸಿರಿ.
* ಕುದುರೆಯ ದೇಹದ ಎರಡು ಭಾಗವನ್ನು ಕಂದು ಬಣ್ಣದ ಬಟ್ಟೆಯಿಂದ ಕತ್ತರಿಸಿರಿ.
* ಮಾದರಿಯ ಕೆಳ ಭಾಗಕ್ಕೆ ೩ ಸೆಂಟಿಮೀಟರ್ ಸೇರಿಸಲು ಮರೆಯಬೇಡಿರಿ.
* ಕೆಂಪು ಬಟ್ಟೆಯಲ್ಲಿ ಒಂದು ಬಾಯಿ ಕತ್ತರಿಸಿರಿ.





೨. ಕತ್ತರಿಸಿದ ಮುಖ್ಯ ತುಂಡುಗಳನ್ನು ಹೊಲಿಯಿರಿ
* ಕಂದು ಬಣ್ಣದ ದಾರದಿಂದ ಕುದುರೆಯ ದೇಹದ ಎರಡು ಭಾಗಗಳನ್ನು ಹೊಲಿಯಿರಿ (ಬಾಯಿಯನ್ನು ಒಟ್ಟಾಗಿ ಅಥವಾ ನಿಮ್ಮ ಕೈ ಒಳಗಿಡಲು ಅವಕಾಶವಿರುವ ಕುತ್ತಿಗೆಯ ಕೆಳಭಾಗವನ್ನು ಸೇರಿಸಿ ಹೊಲಿಯಬೇಡಿರಿ).
* ಕಂದು ಬಣ್ಣದ ಕುದುರೆಯ ಬಾಯಿಗೆ ಕೆಂಪು ಬಾಯಿಯನ್ನು ಹೊಲಿಯಿರಿ. (ನೋಡುತ್ತಾ ಮಾಡಬಯಸಿದರೆ ದೃಶ್ಯಗಳನ್ನು ನೋಡಿರಿ.) ಕೋನಗಳನ್ನು ಸರಿಯಾಗಿ ಹೊಂದಿಸಲು ತ್ರಿಕೋನ ಘಟಕಗಳನ್ನು ಉಪಯೋಗಿಸಿರಿ.

೩. ಹೊಲಿದಿರುವ ಕುದುರೆಯ ಬಲ ಭಾಗವನ್ನು ತಿರುಗಿಸಿರಿ, ಆದ ಹಾಕಿದ ಹೊಲಿಗೆಗಳು ಇಳಭಾಗದಲ್ಲಿರುತ್ತವೆ.

೪. ಕಿವಿಗಳು, ಕೂದಲು ಮತ್ತು ಮೂಗಿಗೆ ವಿವಿಧ ಶೈಲಿಯನ್ನು ಆಯ್ಕೆ ಮಾಡಿರಿ. ಮಾದರಿಗನುಸಾರವಾಗಿ ತುಂಡುಗಳನ್ನು ಕತ್ತರಿಸಿರಿ ಅಥವಾ ನೀವು ಸ್ವಂತವಾಗಿ ಸೃಷ್ಟಿಸಿರಿ.

೫. ಕಿವಿಗಳು, ಕೂದುಲು ಮತ್ತು ಮೂಗನ್ನು ಗೋಂದಿನಿಂದ ಅಂಟಿಸಿರಿ. ನಾವು ಬಿಸಿಯಾದ ಗೋಂದು (ಸಿಲಿಕೋನ್) ಬಳಸಿದ್ದೇವೆ, ಯಾಕಂದರೆ ಇದು ತುಂಡುಗನ್ನು ಹೊಲಿಗೆಯ ಮೂಲಕ ಒಟ್ಟುಗೂಡಿಸುವದಕ್ಕಿಂತಲೂ ಸುಲಭವಾದ ಕಾರ್ಯವಾಗಿದೆ.

೬. ಆರೆಂಜ್ ಬಣ್ಣದ ಕೂದಲನ್ನು ಅಂಟಿಸಿರಿ, ನಂತರ ಕೂದಲನ್ನು ಬಿಡಿಬಿಡಿಯಾಗಿ ತೋರಿಸಲು ಮಧ್ಯದಲ್ಲಿ ಕತ್ತರಿಸಿರಿ. ದಪ್ಪ ಕಣ್ಣುಗಳನ್ನು ಅಂಟಿಸಿರಿ ಅಥವಾ ಚಿತ್ರದಲ್ಲಿ ತೋರಿಸಿರುವ ಪ್ರಕಾರ ಪ್ಲಾಸ್ಟಿಕ್ ಚಮಚ ಉಪಯೋಗಿಸಿರಿ. ನಾವು ಉಪಯೋಗಿಸಿ ಬಿಸಾಡುವ ಚಮಚವನ್ನು ಕಣ್ಣುಗಳಿಗೆ ಉಪಯೋಗಿಸಿದ್ದೇವೆ (ಆದರೆ ಅದರ ಹಿಡಿಯನ್ನು ಕತ್ತರಿಸಿದ್ದೇವೆ) ಮತ್ತು ಕಣ್ಣು ಗುಡ್ಡೆಗೆ ಕಪ್ಪು ಬಣ್ಣದ ಉಣ್ಣೆಯ ಬಟ್ಟೆಯನ್ನು ಗೋಲಾಕಾರದಲ್ಲಿ ಉಪಯೋಗಿಸಿದ್ದೇವೆ.

೭. ಕಿವಿಯನ್ನು ಕಂದು ಬಣ್ಣದ ಬಟ್ಟೆಯಲ್ಲಿ ಕತ್ತರಿಸಿರಿ, ನಂತರ ಒಂದುವೇಳೆ ಬೇಕಿದ್ದರೆ ಆರೆಂಜ್ ಬಣ್ಣದಲ್ಲಿ ಕಿವಿಯ ಸಣ್ಣ ತುಂಡನ್ನು ಕತ್ತರಿಸಿರಿ. ಕಿವಿಯನ್ನು ಒಟ್ಟಾಗಿಸಿರಿ ಮತ್ತು ತಲೆಗೆ ಅಂಟಿಸಿರಿ.


೮. ಮೂಗಿನ ತುಂಡುಗಳನ್ನು ಕತ್ತರಿಸಿರಿ ಮತ್ತು ಕೈಂಗೊಂಬೆಯ ಮುಂಭಾಗದಲ್ಲಿ ಅಂಟಿಸಿರಿ.

೯. ತಲೆಯನ್ನು ಉಬ್ಬಿಸಲು ತಲೆದಿಂಬಿನ ಹತ್ತಿಯನ್ನು ಉಪಯೋಗಿಸಿರಿ. ನಿಮ್ಮ ಕೈ ಹೋಗುವ ಕಡೆ ಮೂಗಿನ ಮುಂದೆ ಒಳಗಿಡಿರಿ. ಒಂದುವೇಳೆ ಬೇಕಿದ್ದರೆ ಬಾಯಿಯನ್ನು ದೃಡಪಡಿಸಲು ನೀವು ಸ್ವಲ್ಪ ಕಾರ್ಡ್ ಬೋರ್ಡ್ ಸಹ ಅಂಟಿಸಬಹುದು.

ಹೀಗೆ ಮಾಡಿದರೆ ಕುದುರೆಯ ಕೈಗೊಂಬೆ ಸಿದ್ಧವಾಗುತ್ತದೆ!

## ಹುಂಜದ ಕೈಗೊಂಬೆ ಮಾಡಲು ಸೂಚನೆಗಳು:





೧. ಹುಂಜದ ದೇಹ ಮತ್ತು ಬಾಯಿಗಾಗಿ ಬಟ್ಟೆಯನ್ನು ಕತ್ತರಿಸಿಕೊಳ್ಳಿರಿ.

* ಹುಂಜದ ದೇಹದ ಎರಡು ಭಾಗಗಳನ್ನು ಬಿಳಿ ಬಟ್ಟೆಯಲ್ಲಿ ಕತ್ತರಿಸಿಕೊಳ್ಳಿರಿ.

* ಮಾದರಿಯ ಕೆಳಭಾಗಕ್ಕೆ ೧೦ ಸೆಂಟಿಮೀಟರ್ ಸೇರಿಸಲು ಮರೆಯಬೇಡಿರಿ.*

* ಒಂದು ಬಾಯಿಯನ್ನು ಕಂದು ಬಣ್ಣದ ಬಟ್ಟೆಯಲ್ಲಿ ಕತ್ತರಿಸಿರಿ.



೨. ದಾರದಿಂದ ದೇಹವನ್ನು ಒಟ್ಟಾಗಿ ಹೊಲಿಯಿರಿ.


೩. ಬಿಳೀ ದೇಹದ ಬಾಯಿಯ ಜಾಗದಲ್ಲಿ ಆರೆಂಜ್ ಬಣ್ಣದ ಬಾಯಿಯ ತುಂಡನ್ನು ಹೊಲಿಯಿರಿ.



೪. ಆರೆಂಜ್ ಬಣ್ಣದ ಕೊಕ್ಕಿನೊಳಗೆ ಕಂದು ಬಣ್ಣದ ಬಾಯಿಯನ್ನು ಹೊಲಿಯಿರಿ. ಹೊಲಿಯುವದು ಮುಗಿದ ನಂತರ, ಕೈಗೊಂಬೆಯ ಬಲಭಾಗವನ್ನು ತಿರುಗಿಸಿರಿ.









೫. ಜುಟ್ಟು, ಪುಕ್ಕ ಮತ್ತು ಕಣ್ಣುಗಳಿಗೆ ವಿವಿಧ ಶೈಲಿಗಳನ್ನು ಅಯ್ಕೆ ಮಾಡಿರಿ. ಮಾದರಿಗನುಸಾರವಾಗಿ ತುಂಡು ಮಾಡಿರಿ ಅಥವಾ ನೀವೇ ಸ್ವಂತವಾಗಿ ಉಂಟು ಮಾಡಿರಿ.



೬. ಜುಟ್ಟು, ಪುಕ್ಕ ಮತ್ತು ಕಣ್ಣುಗಳನ್ನು ಗೋಂದಿನಿಂದ ಅಂಟಿಸಿರಿ. ನಾವು ಬಿಸಿ ಗೋಂದು ಬಳಸಿದ್ದೇವೆ, ಯಾಕಂದರೆ ತುಂಡುಗಳನ್ನು ಒಟ್ಟಾಗಿ ಹೊಲಿಯುವದಕ್ಕಿಂತಲೂ ಇದು ಸುಲಭವಾಗಿರುತ್ತದೆ.



೭. ಒಂದುವೇಳೆ ಬೇಕಿದ್ದರೆ ತಲೆಯ ಭಾಗಕ್ಕೆ ಹತ್ತಿಯನ್ನು ಒತ್ತಿ ತುಂಬಿರಿ.

೮. ನಿಮ್ಮ ಕೈಗೊಂಬೆಯ ಪಕ್ಕಕ್ಕೆ ಪುಕ್ಕಗಳನ್ನು ಹೊಲಿಯಿರಿ ಅಥವಾ ಅಂಟಿಸಿರಿ.

೯. ವೈಯರ್ ಮುಂಭಾಗದಲ್ಲಿ ಅಂಟಿಸಲು ಬಿಳಿ ಬಟ್ಟೆಯನ್ನು ಚೌಕಾಕಾರದಲ್ಲಿ ಉಪಯೋಗಿಸಿರಿ. ಬಟ್ಟೆಯ ಮಧ್ಯದಲ್ಲಿ ವೈಯರ್ ಸರಿಯಾಗಿ ಜೋಡಣೆಯಾಗಲು ಮತ್ತು ಉಳಿಯಲು ಸಿಲಿಕೋನ್ ಗೋಂದು ಅಥವಾ ಬಿಸಿ ಗೋಂದು ಉಪಯೋಗಿಸಿರಿ.

ಹೀಗೆ ಮಾಡಿದರೆ ಹುಂಜದ ಕೈಗೊಂಬೆ ಸಿದ್ಧವಾಗುತ್ತದೆ!